ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್. ರಸ್ತೆ, ತುಮಕೂರು-572 103 ☏ : 0816-2255650, 2273511 ಫ್ಯಾಕ್ಸ್ : 0816-2270719

ಸಂಖ್ಯೆ : ತು.ವಿ. : ಪ.ವಿ.:2019-20/ ದಿನಾಂಕ: 30.11.2019

## ಸುತ್ತೋಲೆ

ತುಮಕೂರು ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ, ಪ್ರಸಕ್ತ ಸಾಲಿನಿಂದ ಘಟಿಕೋತ್ಸವ ಅರ್ಜಿಗಳನ್ನು ಸಲ್ಲಿಸುವ ಪ್ರಕ್ರಿಯೆಯನ್ನು ಡಿಜಿಟಲೀಕರಣಗೊಳಿಸಿ, ಈ ಸಂಬಂಧ ವಿಶ್ವಿವಿದ್ಯಾನಿಲಯದ ಎಲ್ಲಾ ಸಂಯೋಜಿತ ಕಾಲೇಜು / ವಿಭಾಗದ ಪ್ರಾಂಶುಪಾಲರು / ಮುಖ್ಯಸ್ಥರು ಮತ್ತು ಸಿಬ್ಬಂದಿಗಳಿಗೆ ಕಾರ್ಯಾಗಾರವನ್ನು ಏರ್ಪಡಿಸಿ ಪ್ರಕ್ರಿಯೆಯ ರೂಪು-ರೇಷೆಗಳ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂಬಂದ ಯು.ಆರ್.ಎಲ್.ನ್ನು ದಿನಾಂಕ: 30.11.2019 ರಿಂದ ವಿಶ್ವವಿದ್ಯಾನಿಲಯದ ಎಲ್ಲಾ ಕಾಲೇಜು / ವಿಭಾಗಗಳಿಗೆ ಮುಕ್ತಗೊಳಿಸಲಾಗಿರುತ್ತದೆ.

ಅರ್ಜಿ ಸಲ್ಲಿಕೆಗೆ ಸಂಬಂಧಿಸಿದಂತೆ ಈ ಕೆಳಗಿನ ಸೂಚನೆಗಳಂತೆ ಕಾರ್ಯನಿರ್ವಹಿಸಲು ತಿಳಿಸಲಾಗಿದೆ.

1. ಘಟಿಕೋತ್ಸವ ಅರ್ಜಿಗಳನ್ನು ಸಲ್ಲಿಸಲು ಮತ್ತು ವಿದ್ಯಾರ್ಥಿಗಳ ಭಾವಚಿತ್ರಗಳನ್ನು ಒಂದೇ ಬಾರಿ ಅಳವಡಿಸುವ (photo bulk upload) ಸಂಬಂಧ ಪ್ರಸ್ತುತ ಕಾಲೇಜುಗಳಲ್ಲಿ ಬಳಕೆಯಲ್ಲಿರುವ ಇ.ಎಂ.ಎಸ್. ಲಾಗಿನ್ ಬದಲಾಗಿ ಬೇರೆ ಯು.ಆರ್.ಎಲ್. ನೀಡುತ್ತಿದ್ದು (http://164.100.133.129:81/emstutconvocation/), ಇದರ ಮೂಲಕವೇ ಅರ್ಜಿಗಳನ್ನು ಸಲ್ಲಿಸುವಂತೆ ತಿಳಿಸಲಾಗಿದೆ. ಸದರಿ ಯು.ಆರ್.ಎಲ್.ನಲ್ಲಿ ಲಾಗಿನ್ ಆಗಲು ಪ್ರಸ್ತುತ ಇ.ಎಂ.ಎಸ್. ಲಾಗಿನ್‌ಗೆ ಬಳಸುವ ಯೂಸರ್ ನೇಮ್ ಹಾಗೂ ಪಾಸ್‌ವರ್ಡ್‌ಗಳನ್ನೇ ಬಳಸಬೇಕಾಗಿರುತ್ತದೆ.
2. ಕಾಲೇಜು / ವಿಭಾಗಗಳ ಹಂತದ ಈ ಮೇಲೆ ತಿಳಿಸಿರುವ ಯು.ಆರ್.ಎಲ್. ಮೂಲಕವೇ ಘಟಿಕೋತ್ಸವ ಪದವಿ ಪ್ರಮಾಣ ಪತ್ರಕ್ಕಾಗಿ ಅರ್ಜಿಗಳನ್ನು ಸಲ್ಲಿಸಬೇಕಾಗಿದ್ದು, ಅಭ್ಯರ್ಥಿಗಳಿಗೆ ನೇರ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
3. ಪ್ರಸ್ತುತ ವಿಶ್ವವಿದ್ಯಾನಿಲಯದ ಅಧಿಸೂಚನೆಯಂತೆ ಕೊನೆಯ ದಿನಾಂಕದೊಳಗೆ 2018-19ನೇ ಸಾಲಿನಲ್ಲಿ ವಿವಿಧ ಪದವಿ ಪೂರ್ಣಗೊಳಿಸಿರುವ ಅರ್ಹ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದ್ದು, ಇತರೆ ಈ ಹಿಂದಿನ ಘಟಿಕೋತ್ಸವಗಳಲ್ಲಿ ಅರ್ಹರಾಗಿ ಪದವಿ ಪ್ರಮಾಣ ಪತ್ರ ಪಡೆಯದ ಅಭ್ಯರ್ಥಿಗಳಿಗೆ ತದನಂತರ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮುಕ್ತಗೊಳಿಸಲಾಗುವುದು.
4. ಈ ಮೇಲೆ ತಿಳಿಸಲಾದ ಯು.ಆರ್.ಎಲ್. (http://164.100.133.129:81/emstutconvocation/) ಘಟಿಕೋತ್ಸವ ಅರ್ಜಿಗಳನ್ನು ಸಲ್ಲಿಸಲು ಹಾಗೂ ಸಂಬಂದಪಟ್ಟ ಕಾಲೇಜುಗಳ ವಿದ್ಯಾರ್ಥಿಗಳ ಭಾವಚಿತ್ರಗಳನ್ನು ಒಂದೇಬಾರಿ ಅಳವಡಿಸುವ (photo bulk upload) ಕಾರ್ಯಗಳಿಗಾಗಿ ಮಾತ್ರ ರೂಪಿಸಲ್ಪಟ್ಟಿದ್ದು, ಸದರಿ ಕಾರ್ಯಗಳನ್ನು ಹೊರತುಪಡಿಸಿ ಇತರೆ ಕಾರ್ಯಗಳಿಗೆ ಆಯಾ ಕಾಲೇಜುಗಳಲ್ಲಿ ಪ್ರಸ್ತುತ ಬಳಕೆಯಲ್ಲಿರುವ ಇ.ಎಂ.ಎಸ್. ಲಾಗಿನ್ ಮೂಲಕ ಕಾರ್ಯನಿರ್ವಹಿಸಲು ಸೂಚಿಸಿದೆ.
5. ಆನ್‌ಲೈನ್‌ನಲ್ಲಿ ಘಟಿಕೋತ್ಸವ ಅರ್ಜಿ ಸಲ್ಲಿಸಲು ಸದರಿ ಯು.ಆರ್.ಎಲ್.ನಲ್ಲಿ ಈ ಕೆಳಗಿನ flow chart ನಂತೆ ಕಾರ್ಯನಿರ್ವಹಿಸಬೇಕಾಗಿರುತ್ತದೆ.

Menu ⟶ Convocation
↓

1. Apply Convocation - (Only for apply convocation)
2. View convocation - View [Cancelling application may be done here (if necessary] & Download application
3. Rejected list apply - Here rejected candidates list appears (may reapply by fulfilling the reason)
4. Convocation dashboard – Report of applied candidates appears

ಉಪಕುಲಸಚಿವರು (ಪರೀಕ್ಷಾಂಗ)

ಗೆ,

ಪ್ರಾಂಶುಪಾಲರು / ಮುಖ್ಯಸ್ಥರು, ಎಲ್ಲಾ ಸಂಯೋಜಿತ ಕಾಲೇಜುಗಳು / ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿ: ಕಛೇರಿ ಪ್ರತಿ.